# ಆಹಾ ಸುದ್ದಿ!

★ ಸಸಿತೋಟ



ಸಿಂಗಪುರದ ಈ ಮೂವರು ವಯೋವೃದ್ಧರು 'ಕ್ಯಾಲಿಸ್ತೆನಿಕ್ಸ್' ಎಂಬ ಅತ್ಯಂತ ಪ್ರಾಚೀನ ವ್ಯಾಯಾಮ ಮಾಡುವುದನ್ನು ರೂಢಿಸಿಕೊಂಡಿದ್ದಾರೆ. ಯಾವುದೇ ಪರಿಕರಗಳಿಲ್ಲದೇ ಮಾಡುವ ಈ ವ್ಯಾಯಾಮವನ್ನು ವಾರಕ್ಕೆ ಮೂರು ಬಾರಿ ಅಭ್ಯಾಸ ಮಾಡುತ್ತಾರಂತೆ. ಜೊತೆಗೆ 2-3 ತಿಂಗಳಿಗೊಮ್ಮೆ ಪ್ರದರ್ಶನವನ್ನೂ ನೀಡುತ್ತಾರಂತೆ. 70ರ ಹರೆಯದಲ್ಲೂ ಅಡ್ರೆನಲಿನ್ ಹಾರ್ಮೋನ್ ಏರಿಕೆಗೆ ವಯಸ್ಸು ಅಡ್ಡಿಯಾಗಿಲ್ಲ ಇವರಿಗೆ.



ದಕ್ಷಿಣ ಆಫ್ರಿಕಾದ ರಾಷ್ಟ್ರೀಯ ಉದ್ಯಾನವನದಲ್ಲಿ ಪುಟ್ಟ ಕಾರಿನಲ್ಲಿದ್ದ ಮಹಿಳೆ ಆನೆ ಮತ್ತು ಸಿಂಹಗಳ ಗುಂಪಿನ ಮಧ್ಯೆ ಸಿಕ್ಕಿಹಾಕಿಕೊಂಡಿದ್ದು ಹೀಗೆ. ಅತ್ತ ದರಿ, ಇತ್ತ ಪುಲಿ ಎಂದರೆ ಇದೇ ಇರಬಹುದು.

15ಕ್ಕೆ 6 ಕೂಡಿದರೆ 17 ಎಂದು ಉತ್ತರ ಕೊಟ್ಟ ಉತ್ತರಪ್ರದೇಶದ ರಸೂಲಾಬಾದ್‌ನ ವರ ರಾಮ್‌ಬರಣ್ ಈಗ ಮದುವೆ ಮುರಿದಿದ್ದರಿಂದ ಬೆರಳುಗಳನ್ನು ಎಣಿಸುತ್ತ ಕೂತಿದ್ದಾನಂತೆ. ವಧು ಲವ್ಲಿ ಸಿಂಗ್ ಈ ಸರಳ ಪರೀಕ್ಷೆ ನಡೆಸಿ ತನ್ನ ಭಾವಿ ವರನ ಅನಕ್ಷರತೆ ಪತ್ತೆ ಹಚ್ಚಿ ಮದುವೆಗೆ ಟಾಟಾ ಹೇಳಿಬಿಟ್ಟಿದ್ದಾಳೆ. ಸದ್ಯ ರಾಮ್‌ಬರಣ್ ಒಂದನೇ ಇಯತ್ತೆಗೆ ಪ್ರವೇಶ ಗಿಟ್ಟಿಸಲು ಶಾಲೆಗಳನ್ನು ಹುಡುಕುತ್ತಿರಬಹುದು.



ಸೆಲ್ಫಿ ಕ್ರೇಜ್ ಹೇಗೆ ಏರುತ್ತಿದೆಯೆಂದರೆ ಅಪರೂಪದ ಫೋಟೊ ಸಲುವಾಗಿ ಕೆಲವರಿಗೆ ಜೀವದ ಹಂಗೂ ಇರುವುದಿಲ್ಲ. ಬ್ರೆಜಿಲ್‌ನ ಈ ಛಾಯಾಗ್ರಾಹಕ ತಿಯಾಗೊ ಕೊರ್ರಿಯ ರಿಯೊ ಡಿಜನೈರೋದ 124 ಅಡಿ ಎತ್ತರದ ಕ್ರೈಸ್ತ್ ದಿ ರಿಡೀಮರ್ ಪ್ರತಿಮೆಯನ್ನು ಏರಿ ಸೆಲ್ಫಿ ತೆಗೆದುಕೊಂಡಿದ್ದಾನೆ. ಸಾಹಸ ಯಶಸ್ವಿಯಾದರೆ 'ಮೈಸೆಲ್ಫ್'ಗೆ ಕ್ರೆಡಿಟ್ ಹೋಗುತ್ತದೆ; ಎಡವಟ್ಟಾದರೆ 'ಯುವರ್‌ಸೆಲ್ಫ್' ಎಂದು ಆಡಳಿತ, ಪೊಲೀಸ್‌ಗೆ ಕ್ರೆಡಿಟ್!



ಸ್ಪೇನ್ ಪ್ರಧಾನಿ ಮರಿಯಾನೊ ರಜೋಯ್ ಹಾಗೂ ಪ್ರತಿ ಪಕ್ಷದ ನಾಯಕನ ಹಾರ್ಡ್‌ಬೋರ್ಡ್ ಕಲಾಕೃತಿಗಳಿವು. ಸ್ಪೇನ್ ನಗರ ವ್ಯಾಲೆನ್ಸಿಯಾದಲ್ಲಿ ಒಂದು ವಾರ ನಡೆದ ವಾರ್ಷಿಕ ಫಲ್ಲಾಸ್ ಉತ್ಸವದ ಕೊನೆಯಲ್ಲಿ ಈ 'ನಿನೊಟ್ಸ್' ಗಳನ್ನು ಸುಡಲಾಯಿತು. ಇಡೀ ನಗರದಲ್ಲಿ 700ಕ್ಕೂ ಅಧಿಕ ರಾಜಕಾರಣಿಗಳ ಕಲಾಕೃತಿಗಳದ್ದೇ ಕಾರುಬಾರಂತೆ. ಉತ್ತರ ಭಾರತದಲ್ಲಿ ದುಶ್ಶೇರಾ ಆಚರಣೆ ಕೊನೆಯಲ್ಲಿ ರಾವಣನ ದಹನ ಮಾಡಿದ ಹಾಗೆ ಅಲ್ಲಿಯೂ ದುಷ್ಟರ ದಹನ ನಡೆಯುತ್ತದೆ ಅಂತಾಯ್ತು.

ಹಾಲೆಂಡ್‌ನಲ್ಲಿ ಖ್ಯಾತ ಪೀಠೋಪಕರಣ ಮಳಿಗೆಯೊಂದು ಕಣ್ಣಾಮುಚ್ಚಾಲೆ ಆಟಕ್ಕೆ ಅವಕಾಶ ನೀಡಿದೆಯಂತೆ. ಬೃಹತ್ತಾದ ಮಳಿಗೆಯಲ್ಲಿ ಪೀಠೋಪಕರಣಗಳ ಹಿಂದೆ, ಶಾಪಿಂಗ್ ಬ್ಯಾಗ್‌ನಲ್ಲಿ, ಫ್ರಿಜ್‌ನಲ್ಲಿ... ಹೀಗೆ ಎಲ್ಲೆಂದರೆ ಅಲ್ಲಿ ಮಂದಿ ಅಡಗಿಕೊಂಡು ಆಟದ ಸವಿ ಸವಿಯಬಹುದು. ಆದರೆ ಸಣ್ಣ ಸಮಸ್ಯೆ ತಲೆದೋರಿದೆ. ಇದಕ್ಕಾಗಿ 19 ಸಾವಿರ ಮಂದಿ ಫೇಸ್‌ಬುಕ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದು, ಕಂಪೆನಿ ಕಂಗಾಲಾಗಿದೆ. ಈ ಮಾರಾಟ ತಂತ್ರ ಎಂಬ ಆಟ ಹೀಗೆ ಕೈ ಕೊಡಬಾರದಿತ್ತು.